**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ**
**ನಿರ್ವಾಚನ ನಿಲಯ,ಶೇಷಾದ್ರಿರಸ್ತೆ, ಬೆಂಗಳೂರು**-560 001.
**ದೂರವಾಣಿ**- 080-22224212

**ಸಂಖ್ಯೆ.**DPAR 08 CHUVISA (MC) 2023 **ದಿನಾಂಕ:** 20.03.2024

**ಸಾರ್ವತ್ರಿಕ ಲೋಕಸಭಾ ಚುನಾವಣೆ-2024**
**ಮತ್ತು ಉಪಚುನಾವಣೆ 36-ಸುರಪುರ ವಿಧಾನ ಸಭಾ ಕ್ಷೇತ್ರ 2024**

## ಪತ್ರಿಕಾ ಪ್ರಕಟಣೆ

### 1. ಪರ್ಯಾಯ ಗುರುತಿನ ದಾಖಲೆಗಳು:

ಭಾರತ ಚುನಾವಣಾ ಆಯೋಗ ದಿನಾಂಕ: 19ನೇ ಮಾರ್ಚ್, 2024ರ ಆದೇಶ ಸಂಖ್ಯೆ.3/4/ID/2024/SDR/VOL.I ರಲ್ಲಿ ಸೂಚಿಸಿರುವಂತೆ ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಮತದಾರರು ತಮ್ಮ ಮತಗಳನ್ನು ಚಲಾಯಿಸುವ ಮೊದಲು ಮತದಾನ ಕೇಂದ್ರಗಳಲ್ಲಿ ಅವರ ಗುರುತಿಗಾಗಿ ಮತದಾರರ ಗುರುತಿನ ಚೀಟಿಯನ್ನು ಹಾಜರುಪಡಿಸಬೇಕೆಂದು ನಿರ್ದೇಶಿಸಲಾಗಿದ್ದು. ಗುರುತಿನ ಚೀಟಿಯನ್ನು ಹಾಜರುಪಡಿಸಲು ಸಾಧ್ಯವಾಗದ ಸಮಯದಲ್ಲಿ ಮತದಾರರು ತಮ್ಮ ಗುರುತನ್ನು ಸಾಬೀತುಪಡಿಸಲು ಈ ಕೆಳಗಿನ ಯಾವುದಾದರೊಂದು ಪರ್ಯಾಯ ಫೋಟೋ ಗುರುತಿನ ದಾಖಲೆಯನ್ನು ಒದಗಿಸಬಹುದಾಗಿದೆ ಎಂದು ತಿಳಿಸಿದೆ.

(i) ಆಧಾರ್ ಕಾರ್ಡ್,
(ii) MNREGA ಜಾಬ್ ಕಾರ್ಡ್,
(iii) ಬ್ಯಾಂಕ್/ಪೋಸ್ಟ್ ಆಫೀಸ್ ನೀಡಿದ ಭಾವಚಿತ್ರವಿರುವ ಪಾಸ್‌ಬುಕ್‌ಗಳು,
(iv) ಕಾರ್ಮಿಕ ಸಚಿವಾಲಯದ ಯೋಜನೆಯ ಅಡಿಯಲ್ಲಿ ನೀಡಲಾದ ಆರೋಗ್ಯ ವಿಮಾ ಸ್ಮಾರ್ಟ್ ಕಾರ್ಡ್,
(v) ಚಾಲನಾ ಪರವಾನಗಿ,
(vi) ಪ್ಯಾನ್ ಕಾರ್ಡ್,
(vii) NPR ಅಡಿಯಲ್ಲಿ RGI ನೀಡಿದ ಸ್ಮಾರ್ಟ್ ಕಾರ್ಡ್,
(viii) ಭಾರತೀಯ ಪಾಸ್‌ಪೋರ್ಟ್,
(ix) ಭಾವಚಿತ್ರ ಹೊಂದಿರುವ ಪಿಂಚಣಿಯ ದಾಖಲೆ,
(x) ಕೇಂದ್ರ / ರಾಜ್ಯ ಸರ್ಕಾರ / ಪಿಎಸ್‌ಯು / ಪಬ್ಲಿಕ್ ಲಿಮಿಟೆಡ್ ಕಂಪನಿಗಳು ಉದ್ಯೋಗಿಗಳಿಗೆ ನೀಡಿದ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿಗಳು,
(xi) MPಗಳು/MLAಗಳು/MLC ಗಳಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿಗಳು,
(xii) ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಭಾರತ ಸರ್ಕಾರ ನೀಡಿರುವ ವಿಶಿಷ್ಟ ಅಂಗವೈಕಲ್ಯ ID (UDID) ಕಾರ್ಡ್.

## 2. ಚುನಾವಣಾ ವೆಚ್ಚದ ಮೇಲ್ವಿಚಾರಣೆ :

### 1. ಜಪ್ತಿ:

| ನಗದು | | | |
|---|---|---|---|
| ಜಾರಿ ತಂಡಗಳು(Enforcement teams) | ಹಿಂದಿನ ದಿನದವರಗಿನ ಜಪ್ತಿ ವಿವರ | ಪ್ರಗತಿಯಲ್ಲಿರುವಜಪ್ತಿ | |
| ಕ್ಷಿಪ್ರ ಪಡೆಗಳು (**FS**)/ ಸ್ಥಿರ ಕಣ್ಗಾವಲು ತಂಡಗಳು(**SST**)/ ಪೊಲೀಸ್ | 3,97,29,430 | 5,65,24,180 | |
| ಆದಾಯ ತೆರಿಗೆ | 0 | 20,00,000 | |
| **ಒಟ್ಟು** | | **5,85,24,180** | |

| ಉಚಿತ ಉಡುಗೊರೆ | | | |
|---|---|---|---|
| ಜಾರಿ ತಂಡಗಳು(Enforcement teams) | ಹಿಂದಿನ ದಿನದವರಗಿನ ಜಪ್ತಿವಿವರ | ಪ್ರಗತಿಯಲ್ಲಿರುವ ಜಪ್ತಿ | |
| ಕ್ಷಿಪ್ರ ಪಡೆಗಳು (**FS**)/ ಸ್ಥಿರ ಕಣ್ಗಾವಲು ತಂಡಗಳು(**SST**)/ ಪೊಲೀಸ್ | **42,350** | **5,87,350** | |

| ಇತರೆಗಳು | | | |
|---|---|---|---|
| ಜಾರಿ ತಂಡಗಳು(Enforcement teams) | ಹಿಂದಿನ ದಿನದವರಗಿನ ಜಪ್ತಿವಿವರ | ಪ್ರಗತಿಯಲ್ಲಿರುವ ಜಪ್ತಿ | |
| ಕ್ಷಿಪ್ರ ಪಡೆಗಳು (**FS**)/ ಸ್ಥಿರ ಕಣ್ಗಾವಲು ತಂಡಗಳು(**SST**)/ ಪೊಲೀಸ್ | **1,83,000** | **1,83,000** | |

| ಮದ್ಯ | | | | |
|---|---|---|---|---|
| ಜಾರಿ ತಂಡಗಳು(Enforcement teams) | ಹಿಂದಿನ ದಿನದವರಗಿನ ಜಪ್ತಿವಿವರ | | ಪ್ರಗತಿಯಲ್ಲಿರುವ ಜಪ್ತಿ | |
| | ಪ್ರಮಾಣ (Ltr) | ಮೌಲ್ಯ (Rs.) | ಪ್ರಮಾಣ (Ltr) | ಮೌಲ್ಯ (Rs.) |
| ಕ್ಷಿಪ್ರ ಪಡೆಗಳು (**FS**)/ ಸ್ಥಿರ ಕಣ್ಗಾವಲು ತಂಡಗಳು(**SST**)/ ಪೊಲೀಸ್ | 5,22.491 | 2,12,056.43 | 2,174 | 7,45,890 |
| ಅಬಕಾರಿ | 89,626 | 2,87,82,759 | **6,82,115** | **21,40,75,247** |
| **ಒಟ್ಟು** | | | **6,84,289** | **21,48,21,164** |

| ಡ್ರಗ್ಸ್/ಮಾದಕ ದ್ರವ್ಯ/ವಸ್ತು(DRUGS/NARCOTICS) | | | | |
|---|---|---|---|---|
| ಜಾರಿ ತಂಡಗಳು(Enforcement teams) | ಹಿಂದಿನ ದಿನದವರಗಿನ ಜಪ್ತಿವಿವರ | | ಪ್ರಗತಿಯಲ್ಲಿರುವ ಜಪ್ತಿ | |
| | ಪ್ರಮಾಣ (Kg) | ಮೌಲ್ಯ (Rs.) | ಪ್ರಮಾಣ (Kg) | ಮೌಲ್ಯ (Rs.) |
| ಕ್ಷಿಪ್ರ ಪಡೆಗಳು (**FS**)/ ಸ್ಥಿರ ಕಣ್ಗಾವಲು ತಂಡಗಳು ((**SST**)/ ಪೊಲೀಸ್ಮತ್ತು ಅಬಕಾರಿ | **13.42** | **4,48,090** | **24.30** | **15,21,520** |

| ಅಮೂಲ್ಯ ಲೋಹಗಳು | | | | |
|---|---|---|---|---|
| ಜಾರಿ ತಂಡಗಳು(Enforcement teams) | ಹಿಂದಿನ ದಿನದವರಗಿನ ಜಪ್ತಿವಿವರ | | ಪ್ರಗತಿಯಲ್ಲಿರುವ ಜಪ್ತಿ | |
| | ಪ್ರಮಾಣ. (Kg) | ಮೌಲ್ಯ (Rs.) | ಪ್ರಮಾಣ(Kg) | ಮೌಲ್ಯ (Rs.) |
| ಚಿನ್ನ (**FS/SST**/ಪೊಲೀಸ್) | 0.08 | 4,50,000 | 0.08 | 4,50,000 |
| ಚಿನ್ನ (ಆದಾಯ ತೆರಿಗೆ) | 0 | 0 | 0 | 0 |
| ಚಿನ್ನ ಒಟ್ಟು | 0.08 | 4,50,000 | 0.08 | 4,50,000 |
| ಬೆಳ್ಳಿ (**FS/SST**/ಪೊಲೀಸ್) | 2.00 | 1,60,000 | 2.00 | 1,60,000 |
| ಚಿನ್ನ ಮತ್ತು ಬೆಳ್ಳಿ ಒಟ್ಟು | 2.08 | 6,10,000 | 2.08 | 6,10,000 |
| ಒಟ್ಟು ಮೊತ್ತ | | **7,00,07,685** | | **27,62,47,214** |

### 3. ದಾಖಲಾದ ಪ್ರಕರಣಗಳ ಕುರಿತು ಮಾಹಿತಿ:

a. ಕ್ಷಿಪ್ರಪಡೆಗಳು (**FS**), ಸ್ಥಿರ ಕಣ್ಗಾವಲು ತಂಡಗಳು (**SST**) ಮತ್ತು ಪೊಲೀಸ್ ಅಧಿಕಾರಿಗಳು ನಗದು, ಮದ್ಯ, ಡ್ರಗ್ಸ್, ಬೆಲೆಬಾಳುವ ಲೋಹ ಮತ್ತು ಉಚಿತ ಉಡುಗೊರೆ (**Freebies**) ವಶಪಡಿಸಿಕೊಂಡ ಪ್ರಕರಣಗಳಿಗೆ ಸಂಬಂಧಿಸಿದಂತೆ **205** ಎಫ್ಐಆರ್‌ಗಳನ್ನು ದಾಖಲಿಸಿದ್ದಾರೆ.

b. **47,868** ಶಸ್ತ್ರಾಸ್ತ್ರಗಳನ್ನು ಠೇವಣಿ ಮಾಡಲಾಗಿದೆ**, 827** ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ**, 8** ಶಸ್ತ್ರಾಸ್ತ್ರ ಪರವಾನಗಿಯನ್ನು ರದ್ದುಗೊಳಿಸಲಾಗಿದೆ**,** CRPCಯ ತಡೆಗಟ್ಟುವ ವಿಭಾಗಗಳ ಅಡಿಯಲ್ಲಿ **2,173** ಪ್ರಕರಣಗಳನ್ನು ದಾಖಲಿಸಿದೆ, ಅದರಲ್ಲಿ **2,725** ವ್ಯಕ್ತಿ **/** ವ್ಯಕ್ತಿಗಳನ್ನು ಒಳಪಟ್ಟ ಪ್ರಕರಣಗಳನ್ನು ದಾಖಲಿಸಿದೆ**.**

c. ಅಬಕಾರಿ ಇಲಾಖೆ ಘೋರ ಅಪರಾಧ ಅಡಿಯಲ್ಲಿ **249** ಸಂಖ್ಯೆ ಪ್ರಕರಣಗಳನ್ನು ದಾಖಲಿಸಿದೆ**,** ಪರವಾನಗಿ ಉಲ್ಲಂಘನೆ ಅಡಿಯಲ್ಲಿ **206** ಸಂಖ್ಯೆ ಪ್ರಕರಣ ದಾಖಲಿಸಿದೆ. NDPS ಅಡಿಯಲ್ಲಿ **13** ಸಂಖ್ಯೆ ಪ್ರಕರಣಗಳನ್ನು ಮತ್ತು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಸೆಕ್ಷನ್ 15(a) ಅಡಿಯಲ್ಲಿ **822** ಸಂಖ್ಯೆ ಪ್ರಕರಣಗಳನ್ನು ದಾಖಲಿಸಿದೆ, ಮತ್ತು **156** ಸಂಖ್ಯೆ ವಿವಿಧ ರೀತಿಯ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

4. **ವಿಶೇಷ ವರದಿ:**
   **a)** ವಿಜಯಪುರ ಸೈಬರ್ ಎಕನಾಮಿಕ್ ಮತ್ತು ನಾರ್ಕೋಟಿಕ್ಸ್ (ಸಿಇಎನ್) ಪೊಲೀಸ್ ಠಾಣೆ ತಂಡವು ರೂ. **2,93,50,000/-** ನಗದು ಮೊತ್ತವನ್ನು ಬಿಜಾಪುರ ಲೋಕಸಭಾ ಕ್ಷೇತ್ರದ ವಿಜಯಪುರ ತಾಲೂಕು ಮತ್ತು ಜಿಲ್ಲೆಯಲ್ಲಿ ಜಪ್ತಿ ಮಾಡಲಾಗಿದೆ.
   **b)** ಎಸ್‌ಎಸ್‌ಟಿ ತಂಡ ರೂ. **32,92,500/-** ನಗದು ಮೊತ್ತವನ್ನು ಬಳ್ಳಾರಿ ಜಿಲ್ಲೆಯ ಬಳ್ಳಾರಿ ಲೋಕಸಭಾ ಕ್ಷೇತ್ರದ ಸಿರಗುಪ್ಪ ತಾಲೂಕಿನಲ್ಲಿ ಜಪ್ತಿ ಮಾಡಲಾಗಿದೆ.
   **c)** ಎಸ್‌ಎಸ್‌ಟಿ ತಂಡ ರೂ. **50,00,000/-** ನಗದು ಮೊತ್ತವನ್ನು ಕೊಪ್ಪಳ ಜಿಲ್ಲೆಯ ಕೊಪ್ಪಳ ಲೋಕಸಭಾ ಕ್ಷೇತ್ರದ ಯಲಬುರ್ಗಾ ತಾಲೂಕಿನ ಬನ್ನಿಕೊಪ್ಪ ಚೆಕ್‌ಪೋಸ್ಟ್‌ನಲ್ಲಿ ಜಪ್ತಿ ಮಾಡಲಾಗಿದೆ.

5. **ಸಾರ್ವಜನಿಕ ಕುಂದು ಕೊರತೆ ಪರಿಹಾರ:**
   ಮತದಾರರ ಸಹಾಯವಾಣಿಯ ಮೂಲಕ ಸ್ವೀಕರಿಸಿದ **1,740** ಕರೆಗಳ ಪೈಕಿ **1,737** ಜನರ ಮಾಹಿತಿಯನ್ನು ಕೋರಿದ್ದಾರೆ, **01** ಮತದಾರರು ಪ್ರತಿಕ್ರಿಯೆ ನೀಡಿದ್ದಾರೆ, **0** ಮತದಾರರು ಸಲಹೆಗಳನ್ನು ನೀಡಿದ್ದಾರೆ ಮತ್ತು **03** ಮತದಾರರು ದೂರುಗಳನ್ನು ದಾಖಲಿಸಿದ್ದಾರೆ. ಒಟ್ಟು **1,740** ಕರೆಗಳನ್ನು ವಿಲೇವಾರಿ ಮಾಡಲಾಗಿದೆ. ಹೆಚ್ಚುವರಿಯಾಗಿ, NGRS ಪೋರ್ಟಲ್‌ನಲ್ಲಿ **6,943** ನಾಗರಿಕರಿಂದ ದೂರುಗಳನ್ನು ದಾಖಲಿಸಲಾಗಿದೆ, ಅದರಲ್ಲಿ **6,368** ದೂರುಗಳನ್ನು ವಿಲೇವಾರಿ ಮಾಡಲಾಗಿದೆ.

6. **ಸಿವಿಜಿಲ್(cVIGIL):**
   cVIGIL ಅಪ್ಲಿಕೇಶನ್ ಮೂಲಕ **1,120** ದೂರುಗಳನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಿದ ಪ್ರಮುಖ **663** ದೂರುಗಳು ಅನುಮತಿಯಿಲ್ಲದ ಪೋಸ್ಟರ್‌ಗಳು/ಬ್ಯಾನರ್‌ಗಳಿಗೆ ಸಂಬಂಧಿಸಿವೆ, **06** ಹಣವಿತರಣೆ, **89** ಕಡ್ಡಾಯ ಘೋಷಣೆ ಇಲ್ಲದ ಪೋಸ್ಟರ್‌ಗಳು, ಬಂದೂಕುಗಳ ಪ್ರದರ್ಶನ ಬೆದರಿಕೆ **01,** ಉಡುಗೊರೆಗಳು/ಕೂಪನ್‌ಗಳ ವಿತರಣೆ **07,** ನಿಷೇಧದ ಅವಧಿಯಲ್ಲಿ ಪ್ರಚಾರ **06**, ಮದ್ಯಹಂಚಿಕೆ **03,** ಆಸ್ತಿ ವಿರೂಪಗೊಳಿಸುವಿಕೆ **15,** ಅನುಮತಿಯಿಲ್ಲದೆ ವಾಹನ ಬೆಂಗಾವಲು **04**, ಧಾರ್ಮಿಕ ಅಥವಾ ಸಾಮುದಾಯಿಕ ಭಾಷಣಗಳು/ಸಂದೇಶಗಳು **02,** ಇತರೆ **913,** ಇವುಗಳಲ್ಲಿ ದೂರುಗಳು ಸರಿಯಾಗಿವೆ ಎಂದು ಕಂಡುಹಿಡಿದು ಸೂಕ್ತಕ್ರಮ ಕೈಗೊಳ್ಳಲಾಗಿದೆ.

7. **ಮಾಧ್ಯಮ**(**Media**):
   ಇಮೇಲ್ ಮೂಲಕ ಸ್ವೀಕರಿಸಿದ **05** ದೂರುಗಳು ಮತ್ತು ಪತ್ರಗಳ ಮೂಲಕ ಸ್ವೀಕರಿಸಿದ **08** ದೂರುಗಳು ಸುದ್ದಿ ಪತ್ರಿಕೆಗಳು ಮೂಲಕ ಸ್ವೀಕರಿಸಿದ **02** ದೂರುಗಳು, ಟಿವಿ ಚಾನೆಲ್‌ಗಳ ಮೂಲಕ ಸ್ವೀಕರಿಸಿದ **03** ದೂರುಗಳು ಮತ್ತು ಸಾಮಾಜಿಕ ಮಾಧ್ಯಮ ಮೂಲಕ ಸ್ವೀಕರಿಸಿದ **11** ದೂರುಗಳು ಹೀಗೆ ಒಟ್ಟು ಸ್ವೀಕರಿಸಿದ **29** ದೂರುಗಳ ಪೈಕಿ **29** ದೂರುಗಳು ವಿಲೇವಾರಿ ಮಾಡಲಾಗಿದೆ.

8. **ಸುವಿಧಾ(SUVIDHA):**
   ಸುವಿಧಾ ಅಡಿಯಲ್ಲಿ ಅನುಮತಿಗಳಿಗಾಗಿ, **125** ಅರ್ಜಿಗಳು ಸ್ವೀಕರಿಸಲಾಗಿದೆ, ಅದರಲ್ಲಿ **65** ಅರ್ಜಿಗಳನ್ನು ಅಂಗೀಕರಿಸಲಾಗಿದೆ ಮತ್ತು **34** ಅರ್ಜಿಗಳನ್ನು ತಿರಸ್ಕರಿಸಲಾಗಿದೆ. **01** ಅರ್ಜಿಗಳು ಪ್ರಗತಿಯಲ್ಲಿದೆ.
   **21** ಅರ್ಜಿಗಳು ಬಾಕಿ ಉಳಿದಿವೆ ಮತ್ತು **04** ಅರ್ಜಿಗಳನ್ನು ರದ್ದುಗೊಳಿಸಲಾಗಿದೆ.

****